# ಸಿಂಧನೂರಿನಲ್ಲಿ 3ನೇ ದಿನದ 'ಬಳ್ಳಾರಿ ಚಲೋ' ಸಮಾರೋಪ

● ವಿಕ್ರಮ ವಾಹಿನಿ । ರಾಯಚೂರು

ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ರೈತರ ಸಮಸ್ಯೆಗಳು ಹಾಗೂ ಶೋಷಿತ ಸಮುದಾಯಗಳ ವಿಚಾರಗಳನ್ನು ಜನರ ಮುಂದಿಡುವ ಉದ್ದೇಶದಿಂದ ಬಿಜೆಪಿ ಹಮ್ಮಿಕೊಂಡಿರುವ 'ಬಳ್ಳಾರಿ ಚಲೋ' ಪಾದಯಾತ್ರೆಯ ಮೂರನೇ ದಿನದ ಹೋರಾಟ ಗುರುವಾರ ಸಿಂಧನೂರಿನಲ್ಲಿ ಮುಕ್ತಾಯಗೊಂಡಿತು. ಗುಡದೂರಿನಿಂದ ಆರಂಭವಾದ ಪಾದಯಾತ್ರೆ ಸುಮಾರು 20 ಕಿ.ಮೀ. ಕ್ರಮಿಸಿ ಸಿಂಧನೂರು ತಲುಪಿತು.

ಗುಡದೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹಸಿರು ಶಾಲು ಹಾಗೂ ಪಂಚೆ ಧರಿಸಿ ಎತ್ತಿನಗಾಡಿಯಲ್ಲಿ ನೇಗಿಲು ಹೊತ್ತು, ಬಾರಿಕೋಲು ಬೀಸುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು. ಮಾರ್ಗದುದ್ದಕ್ಕೂ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪಾದಯಾತ್ರೆಗೆ ಬೆಂಬಲ ವ್ಯಕ್ತಪಡಿಸಿದರು.

**ರೈತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಲಿ**

ಪಾದಯಾತ್ರೆ ವೇಳೆ ಮಾತನಾಡಿದ ವಿಜಯೇಂದ್ರ, ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿದ್ದರೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 3,655 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಲ್ಯಾಣ ಕರ್ನಾಟಕದಲ್ಲಿ 937 ಪ್ರಕರಣಗಳು ನಡೆದಿವೆ ಎಂದು ಅಂಕಿ–ಅಂಶಗಳನ್ನು ಉಲ್ಲೇಖಿಸಿದರು.

ರಾಜ್ಯದ ಬರಪೀಡಿತ ರೈತರ 5 ಲಕ್ಷದವರೆಗಿನ ಬೆಳೆ ಸಾಲ ಮನ್ನಾ ಮಾಡಬೇಕು. ಜೋಳದ ಬೆಂಬಲ ಬೆಲೆಯ ಬಾಕಿ 145 ಕೋಟಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಹೈನುಗಾರರಿಗೆ ನೀಡಬೇಕಿರುವ ಪ್ರೋತ್ಸಾಹಧನವನ್ನೂ ಪಾವತಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಎಸ್‌ಸಿಪಿ–ಟಿಎಸ್‌ಪಿ ಯೋಜನೆಗಳ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸದೆ ದಲಿತರು ಹಾಗೂ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಸಮರ್ಪಕವಾಗಿ ವಿನಿಯೋಗಿಸಬೇಕು ಎಂದು ಒತ್ತಾಯಿಸಿದರು. ರೈತರ ಸಮಸ್ಯೆಗಳ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು ಎಂಬ ಬಿಜೆಪಿ ಬೇಡಿಕೆಗೆ ಸರ್ಕಾರ ಸ್ಪಂದಿಸಿರುವುದನ್ನು ಸ್ವಾಗತಿಸಿದ ಅವರು, ಅಧಿವೇಶನದಲ್ಲಿ ರೈತರ ಪ್ರಮುಖ ಬೇಡಿಕೆಗಳನ್ನು ಪ್ರಸ್ತಾಪಿಸುವುದಾಗಿ ತಿಳಿಸಿದರು.

**ರೈತರೊಂದಿಗೆ ನಾಟಿ, ಊಟ**

ಪಾದಯಾತ್ರೆಯ ಸಂದರ್ಭದಲ್ಲಿ ಮುದ್ದಾಪುರ ಕ್ಯಾಂಪ್‌ನಲ್ಲಿ ವಿಜಯೇಂದ್ರ ಅವರು ರೈತ ಮಹಿಳೆಯರೊಂದಿಗೆ ನಾಟಿ ಕಾರ್ಯದಲ್ಲಿ ಭಾಗವಹಿಸಿದರು. ಬಳಿಕ ಕೂನಟಗಿ ಕ್ರಾಸ್‌ನಲ್ಲಿ ರೈತ ಮಹಿಳೆಯರು ತಂದಿದ್ದ ಊಟವನ್ನು ಅವರೊಂದಿಗೆ ಕುಳಿತು ಸೇವಿಸಿದರು. ಮಾರ್ಗದುದ್ದಕ್ಕೂ ರೈತರು ಹಾಗೂ ಸಾರ್ವಜನಿಕರೊಂದಿಗೆ ಸಂವಾದ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದರು.

**ಅಂಬೇಡ್ಕರ್–ಕನಕದಾಸರಿಗೆ ನಮನ**

ಸಿಂಧನೂರು ಪ್ರವೇಶಿಸುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ವಿಜಯೇಂದ್ರ ಅವರಿಗೆ ಅದ್ದೂರಿ ಸ್ವಾಗತ ನೀಡಿದರು. ಬಳಿಕ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಕನಕದಾಸರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ನಂತರ ನಡೆದ ಸಾರ್ವಜನಿಕ ಸಮಾರಂಭದೊಂದಿಗೆ ಮೂರನೇ ದಿನದ ಪಾದಯಾತ್ರೆ ಮುಕ್ತಾಯಗೊಂಡಿತು.

ಪಾದಯಾತ್ರೆಗೆ ಕಪ್ಪು ಬಾವುಟ ಪ್ರದರ್ಶಿಸುವಂತೆ ಕಾಂಗ್ರೆಸ್ ಮುಖಂಡರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, "ಕಪ್ಪು ಬಾವುಟ ತೋರಿಸುವ ಬದಲು ರೈತರ ಕಣ್ಣೀರು ಒರೆಸುವ ಕೆಲಸವನ್ನು ಸರ್ಕಾರ ಮಾಡಲಿ. ಜನರು ಎಲ್ಲವನ್ನೂ ಗಮನಿಸುತ್ತಿದ್ದು, ಸೂಕ್ತ ಸಮಯದಲ್ಲಿ ಉತ್ತರ ನೀಡಲಿದ್ದಾರೆ" ಎಂದು ಹೇಳಿದರು.

ಬಿಜೆಪಿ ಮುಖಂಡರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ರೈತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.



## 'ಹೋರಾಟಕ್ಕೆ ಮಣಿದು ವಿಶೇಷ ಅಧಿವೇಶನ ಕರೆದ ಮುಖ್ಯಮಂತ್ರಿ'

● ವಿಕ್ರಮ ವಾಹಿನಿ । ಗುಡದೂರು

ನಮ್ಮ ಹೋರಾಟಕ್ಕೆ ಬೆಚ್ಚಿ ಬಿದ್ದ ಮುಖ್ಯಮಂತ್ರಿಗಳು ಹೋರಾಟಕ್ಕೆ ಮಣಿದು ವಿಧಾನಮಂಡಲದ ವಿಶೇಷ ಅಧಿವೇಶನ ಕರೆದಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

3ನೇ ದಿನದ ಬಳ್ಳಾರಿ ಚಲೋ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಅವರು ಇಂದು ಮಾಧ್ಯಮಗಳ ಜೊತೆ ಮಾತನಾಡಿದರು. ರಾಜ್ಯದ ರೈತರ ಸಮಸ್ಯೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕು. 5 ಲಕ್ಷದವರೆಗಿನ ಕೃಷಿ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿದ್ದೆ. ಅದಕ್ಕಾಗಿ ವಿಶೇಷ ಅಧಿವೇಶನ ಕರೆಯುವಂತೆ ಒತ್ತಾಯಿಸಿದ್ದೆ ಎಂದು ತಿಳಿಸಿದರು.

ಅಧಿವೇಶನದಲ್ಲಿ ಸಮಗ್ರ ಚರ್ಚೆ ಮಾಡಬೇಕು. ಚರ್ಚೆ ಮಾಡಿ ಕೇವಲ ಕೇಂದ್ರಕ್ಕೆ ಪತ್ರ ಬರೆಯುವುದಲ್ಲ. ಪರಿಹಾರವನ್ನೂ ಸರಕಾರ ಕೊಡಬೇಕು ಎಂದು ಒತ್ತಾಯಿಸಿದರು. ಜಮೀನು ಹೊಡೆದುಕೊಳ್ಳಲು ಹೊರಟಿದ್ದರು. ಬಿಜೆಪಿ ಹೋರಾಟಕ್ಕೆ ಮಣಿದು ಆ ಮಸೂದೆಯನ್ನು ಹಿಂದಕ್ಕೆ ಪಡೆದಿದ್ದಾರೆ ಎಂದು ಹೇಳಿದರು.

ಹೆಲಿಕಾಪ್ಟರ್ ಬಿಟ್ಟು ಭೂಮಿ ಮೇಲೆ ಓಡಾಡಿ..

ಮುಖ್ಯಮಂತ್ರಿಗಳು, ಸಚಿವರು ಹೆಲಿಕಾಪ್ಟರ್‌ನಲ್ಲಿ ಬರ ಅಧ್ಯಯನ ಮಾಡುತ್ತಿರುವುದರಿಂದ ಸಮಸ್ಯೆ ಆಗಿದೆ ಎಂದು ಅವರು ಪ್ರಶ್ನೆಗೆ ಉತ್ತರಿಸಿದರು. ಇದರಿಂದ ರೈತರ ಸಮಸ್ಯೆ ಏನೆಂದು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಮುಖ್ಯಮಂತ್ರಿಗಳೇ, ಹೆಲಿಕಾಪ್ಟರ್ ಬಿಟ್ಟು ದಯವಿಟ್ಟು ಭೂಮಿ ಮೇಲೆ ಬಂದು ಅಧ್ಯಯನ ಮಾಡಿ ಎಂದು ರಾಜ್ಯದ ರೈತರ ಪರವಾಗಿ ಮನವಿ ಮಾಡುವುದಾಗಿ ತಿಳಿಸಿದರು..

## ರೈತರ ಸಮಸ್ಯೆಗಳಿಗಾಗಿ ಗುಡುಗಿದ ವಿಜಯೇಂದ್ರ

- 20 ಕಿ.ಮೀ. ಕ್ರಮಿಸಿದ 3ನೇ ದಿನದ ಬಳ್ಳಾರಿ ಚಲೋ ಪಾದಯಾತ್ರೆ.
- ಗುಡದೂರಿನಲ್ಲಿ ನೇಗಿಲು ಹೊತ್ತು ಎತ್ತಿನಗಾಡಿಯಲ್ಲಿ ಬಾರಿಕೋಲು ಬೀಸಿದ ವಿಜಯೇಂದ್ರ.
- ಮುದ್ದಾಪುರದಲ್ಲಿ ರೈತ ಮಹಿಳೆಯರೊಂದಿಗೆ ನಾಟಿ.
- ಕೂನಟಗಿ ಕ್ರಾಸ್‌ನಲ್ಲಿ ರೈತ ಮಹಿಳೆಯರೊಂದಿಗೆ ಊಟ.
- ಸಿಂಧನೂರಿನಲ್ಲಿ ಕಾರ್ಯಕರ್ತರಿಂದ ಅದ್ದೂರಿ ಸ್ವಾಗತ.
- ಅಂಬೇಡ್ಕರ್ ಹಾಗೂ ಕನಕದಾಸರ ಪ್ರತಿಮೆಗಳಿಗೆ ಮಾಲಾರ್ಪಣೆ.
- ಸಾರ್ವಜನಿಕ ಸಮಾರಂಭದ ಮೂಲಕ ಮೂರನೇ ದಿನದ ಪಾದಯಾತ್ರೆ ಮುಕ್ತಾಯ.
- ರಾಜ್ಯದಲ್ಲಿ 3,655 ರೈತರ ಆತ್ಮಹತ್ಯೆ, ಕಲ್ಯಾಣ ಕರ್ನಾಟಕದಲ್ಲಿ 937 ಪ್ರಕರಣಗಳು ಎಂದು ವಿಜಯೇಂದ್ರ ಉಲ್ಲೇಖ.
- ಬರಪೀಡಿತ ರೈತರ ರೂ 5 ಲಕ್ಷದವರೆಗೆ ಬೆಳೆ ಸಾಲ ಮನ್ನಾ ಮಾಡಲು ಆಗ್ರಹ.
- ರೂ 145 ಕೋಟಿ ಜೋಳದ ಬೆಂಬಲ ಬೆಲೆ ಬಾಕಿ ಪಾವತಿಗೆ ಒತ್ತಾಯ.
- ರೈತರ ಸಮಸ್ಯೆ ಚರ್ಚಿಸಲು ವಿಶೇಷ ಅಧಿವೇಶನದಲ್ಲಿ ಕೃಷಿ ಸಾಲ ಮನ್ನಾ ಪ್ರಸ್ತಾಪಿಸುವುದಾಗಿ ಘೋಷಣೆ.
- ಎಸ್‌ಸಿಪಿ–ಟಿಎಸ್‌ಪಿ ಹಣವನ್ನು ಗ್ಯಾರಂಟಿಗಳಿಗೆ ಬಳಸಲಾಗುತ್ತಿದೆ ಎಂದು ಕಾಂಗ್ರೆಸ್ ವಿರುದ್ಧ ಆರೋಪ
- "ಕಪ್ಪು ಬಾವುಟ ತೋರಿಸುವ ಬದಲು ರೈತರ ಕಣ್ಣೀರು ಒರೆಸಿ" ಎಂದು ಕಾಂಗ್ರೆಸ್‌ಗೆ ತಿರುಗೇಟು.
- ಬಿಜೆಪಿ ಹೋರಾಟದ ಹಿನ್ನೆಲೆಯಲ್ಲಿ ಪಾರ್ಕ್ ಮಸೂದೆ ವಾಪಸ್ ಪಡೆಯಲು ಸರ್ಕಾರ ಮುಂದಾಗಿದೆ ಎಂದು ವಿಜಯೇಂದ್ರ ಲೇವಡಿ.



**ಗುಡದೂರು: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಪಕ್ಷದ ಪ್ರಮುಖರು ಇಂದು ಬಳ್ಳಾರಿ ಚಲೋ ಪಾದಯಾತ್ರೆ ಸಂದರ್ಭದಲ್ಲಿ ರೈತರ ಜೊತೆ ಗದ್ದೆಯಲ್ಲಿ ಭತ್ತದ ನಾಟಿ ಮಾಡಿದರು. ಸ್ವತಃ ರೈತಪರ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಗನಾದ ವಿಜಯೇಂದ್ರ ಅವರು ಇದೇವೇಳೆ ರೈತರ ಬಳಿ ಪ್ರಧಾನಿ ನರೇಂದ್ರ ಮೋದಿಜೀ ಅವರ 'ಕಿಸಾನ್ ಸಮ್ಮಾನ್ ನಿಧಿ' ಖಾತೆಗೆ ತಲುಪುತ್ತಿರುವ ಕುರಿತು ಮಾಹಿತಿ ಪಡೆದರು.**

# ಟಿಎಂಸಿ ಕಚೇರಿ ಧ್ವಂಸ: ಎಲೆಕ್ಟ್ರಾನಿಕ್ ವಸ್ತುಗಳ ಕಳವು

● ವಿಕ್ರಮ ವಾಹಿನಿ । ಕೋಲ್ಕತ್ತಾ

ಕ್ಯಾಮಕ್ ಸ್ಟ್ರೀಟ್‌ನಲ್ಲಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಕಚೇರಿಗೆ ಮುಂಜಾನೆ ನುಗ್ಗಿದ ಅಪರಿಚಿತ ಶಸ್ತ್ರಸಜ್ಜಿತ ಗುಂಪು ಕಚೇರಿಯನ್ನು ಧ್ವಂಸಗೊಳಿಸಿ, ಟಿವಿ, ಕಂಪ್ಯೂಟರ್ ಸೇರಿದಂತೆ ಹಲವು ಎಲೆಕ್ಟ್ರಾನಿಕ್ ವಸ್ತುಗಳನ್ನು ಹೊತ್ತೊಯ್ದಿದೆ. ಕಚೇರಿಯಲ್ಲಿದ್ದ ಕಾರ್ಯಕರ್ತರ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ.

ದಾಳಿಯ ಹಿಂದೆ ಬಿಜೆಪಿ ಕಾರ್ಯಕರ್ತರ ಕೈವಾಡವಿದೆ ಎಂದು ಆರೋಪಿಸಿರುವ ಬ್ಯಾನರ್ಜಿ, ತಪ್ಪಿತಸ್ಥರನ್ನು ತಕ್ಷಣ ಬಂಧಿಸುವಂತೆ ಪೊಲೀಸರನ್ನು ಒತ್ತಾಯಿಸಿದ್ದಾರೆ. ಸುಮಾರು ಎರಡು ಗಂಟೆಗಳ ಕಾಲ ಪೊಲೀಸರಿಗೆ ಕರೆ ಹಾಗೂ ಇ–ಮೇಲ್ ಮೂಲಕ ಮಾಹಿತಿ ನೀಡಿದರೂ ಯಾವುದೇ ಪ್ರತಿಕ್ರಿಯೆ ದೊರೆಯಲಿಲ್ಲ ಎಂದು ಅವರು ದೂರಿದ್ದಾರೆ.

ಘಟನೆ ಕುರಿತು ಪೊಲೀಸರು, ಪಶ್ಚಿಮ ಬಂಗಾಳ ಸರ್ಕಾರ ಹಾಗೂ ಬಿಜೆಪಿಯಿಂದ ಈವರೆಗೆ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ. ಪ್ರಕರಣದ ತನಿಖೆ ಮುಂದುವರಿದಿದೆ.

## *ಒಂದೇ ದಿನ 534 ಪ್ರಕರಣಗಳ ವಿಚಾರಣೆ: ನ್ಯಾ. ನಾಗಪ್ರಸನ್ನ ಹೊಸ ದಾಖಲೆ*

● ವಿಕ್ರಮ ವಾಹಿನಿ । ಬೆಂಗಳೂರು

*ತುರ್ತು ವಿಚಾರಣೆಗೆ ಕೋರಿ ಸಲ್ಲಿಕೆಯಾಗಿದ್ದ 240ಕ್ಕೂ ಅಧಿಕ ಅರ್ಜಿಗಳನ್ನು ಒಂದೇ ದಿನ ವಿಚಾರಣೆ ನಡೆಸುವ ಮೂಲಕ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಕಲಾಪದ ವಿಚಾರಣಾ ವೇಗದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದಾರೆ.*

*ಬುಧವಾರ ಬೆಳಗಿನ ಕಲಾಪದಲ್ಲಿ ನಿಗದಿಯಾಗಿದ್ದ 318 ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿದ ನ್ಯಾಯಮೂರ್ತಿಗಳು, ತುರ್ತು ವಿಚಾರಣೆಗೆ ಕೋರಿ ಸಲ್ಲಿಸಲಾಗಿದ್ದ 240ಕ್ಕೂ ಹೆಚ್ಚು ಮೆಮೊಗಳನ್ನು ಸ್ವೀಕರಿಸಿ, ಅವುಗಳನ್ನು ಮಧ್ಯಾಹ್ನದ ಕಲಾಪ ಪಟ್ಟಿಗೆ ಸೇರಿಸುವಂತೆ ಸೂಚಿಸಿದರು.*

*ಭೋಜನ ವಿರಾಮದ ಬಳಿಕ ಮಧ್ಯಾಹ್ನ 2.30ಕ್ಕೆ ಮತ್ತೆ ಆರಂಭವಾದ ಕಲಾಪ ರಾತ್ರಿ 8.07ರವರೆಗೆ ಮುಂದುವರಿಯಿತು. ಒಂದೇ ದಿನದಲ್ಲಿ ಒಟ್ಟು 534 ರಿಟ್ ಮತ್ತು ಕ್ರಿಮಿನಲ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, ಈ ಪೈಕಿ 85 ಅರ್ಜಿಗಳನ್ನು ವಿಲೇವಾರಿ ಮಾಡಿದರು.*



*ಕಲಾಪಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹಿರಿ–ಕಿರಿಯ ವಕೀಲರು ಹಾಜರಿದ್ದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಗಮನಾರ್ಹ ಚಟುವಟಿಕೆ ಕಂಡುಬಂದಿತು. ಸುಮಾರು ಹತ್ತು ಗಂಟೆಗಳ ಕಾಲ ನಿರಂತರವಾಗಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳ ಕಾರ್ಯವೈಖರಿಯನ್ನು ವಕೀಲರು ಮುಕ್ತಕಂಠದಿಂದ ಶ್ಲಾಘಿಸಿದರು.*

*'ಒಂದೇ ದಿನದಲ್ಲಿ ಸುದೀರ್ಘ ಅವಧಿಯ ಕಲಾಪ ನಡೆಸಿ ಹೆಚ್ಚಿನ ಸಂಖ್ಯೆಯ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ ಮಾಡುವ ಮೂಲಕ ದೇಶದ ಹೈಕೋರ್ಟ್‌ಗಳ ಇತಿಹಾಸದಲ್ಲಿ ಹೊಸ ಹೆಜ್ಜೆ ಮೂಡಿಸಿದ್ದೀರಿ' ಎಂದು ವಕೀಲರು ನ್ಯಾಯಮೂರ್ತಿ ನಾಗಪ್ರಸನ್ನ ಅವರನ್ನು ಅಭಿನಂದಿಸಿದರು.*

*ವಕೀಲ ವೃಂದದಿಂದ ನೇರವಾಗಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ 2019ರ ನವೆಂಬರ್‌ನಲ್ಲಿ ನೇಮಕಗೊಂಡಿರುವ ನ್ಯಾ. ಎಂ. ನಾಗಪ್ರಸನ್ನ ಅವರು, ಪ್ರಕರಣಗಳ ತ್ವರಿತ ವಿಚಾರಣೆ ಮತ್ತು ವಿಲೇವಾರಿಯಲ್ಲಿ ಹಲವು ಗಮನಾರ್ಹ ದಾಖಲೆಗಳನ್ನು ನಿರ್ಮಿಸುತ್ತಿರುವುದು ವಿಶೇಷವಾಗಿದೆ.*

# ವರ್ಣ ರಂಜಿತ ವ್ಯಕ್ತಿತ್ವದ ಜಗತ್ತಿನ ಮಹಾನ್ ಭೋದಕ ಶ್ರೀ ಕೃಷ್ಣ

2ನೇ ಪುಟದಿಂದ...

ಬಾಲ್ಯದಲ್ಲಾಗಲಿ, ಯೌವ್ವನದಲ್ಲಾಗಲಿ ಶ್ರೀಕೃಷ್ಣನ ರೂಪ ಮನಮೋಹಕ. ಹಲವಾರು ದೃಷ್ಟಿಯಲ್ಲಿ ಈತ ಮಾನವನೂ ಹೌದು. ದೇವನೂ ಹೌದು ದೈವೀ ಪಾತ್ರದಲ್ಲಿ ಕಾಣಿಸಿಕೊಳ್ಳುವ ಕೃಷ್ಣನ ನಾಲ್ಕು ಕೈಗಳಲ್ಲೂ ಒಂದೊಂದು ಸಾಮಗ್ರಿ. ಇವೆಲ್ಲ ಸಾಮ–ದಾನ–ಬೇದ–ದಂಡಗಳ ಪ್ರತಿರೂಪ. ಯುದ್ಧ ತಪ್ಪಿಸಲು ರಾಯಭಾರ ನಡೆಸಿದಾಗ ಸಾಮೋಪಾಯ ಮೊದಲು ಬಳಸಿದ. ಕಮಲ–ಇದರ ಸಂಕೇತ. ಎರಡನೆಯದು ದಾನೋಪಯ. ಶಂಖ ಇದರ ಸಂಕೇತ. ದುರ್ಯೋಧನ ನೀನೇ ಬಹುಪಾಲು ರಾಜ್ಯ ಇಟ್ಟುಕೋ. ಪಾಂಡವರಿಗೆ ಐದು ಗ್ರಾಮಕೊಟ್ಟುಬಿಡು ಎಂಬಮಾತು ದುರ್ಯೋಧನ ಕೇಳಲಿಲ್ಲ. ಮೂರನೆಯದು ಭೇದೋಪಾಯ . ಗದೆ ಇದರ ಸಂಕೇತ. ಕರ್ಣನನ್ನು ಬರಮಾಡಿಕೊಂಡು, ನೀನು ಕುಂತಿಯ ಹಿರಿಯ ಮಗ, ಪಾಂಡವರ ಬಳಿ ಬಂದುಬಿಡು. ರಾಜ್ಯ ನೀನೇ ಆಳು. ತಾಯಿಯ ಮನಸ್ಸು ನೋಯಿಸಿ ಕೊಲ್ಲದಿರು ಎಂಬ ಕೃಷ್ಣನ ಮಾತಿಗೆ ಬೆಲೆ ಕೊಡಲಿಲ್ಲ ಕರ್ಣ. ಮಾತೃವಾತ್ಸಲ್ಯ ಬಂಧು ಪ್ರೇಮಕ್ಕಿಂತ ಸ್ವಾಮಿ ನಿಷ್ಠೆಯೇ ಅವನಿಗೆ ಮಿಗಿಲಾಯಿತು. ಕೊನೆಗೆ ಉಳಿದದ್ದು ದಂಡೋಪಾಯ. ಅನಿವಾರ್ಯವಾಗಿ ಯುದ್ಧಕ್ಕೆ ಅಣಿಯಾಗಬೇಕಾಯಿತು. ಕುರುಕ್ಷೇತ್ರ ರಣರಂಗದಲ್ಲಿ ಪಾಂಚಜನ್ಯ ಶಂಖನಾದ ಮಾಡಿದ್ದಲ್ಲದೆ, ಭೀಷ್ಮನ ಮೇಲೆ ಸುದರ್ಶನ ಚಕ್ರ ಪ್ರಯೋಗವನ್ನೂ ಮಾಡಿದ ಶ್ರೀಕೃಷ್ಣ.

ಒಟ್ಟಾರೆ ಹಿಂಸಾಚಾರದ–ರಕ್ತದೋಕುಳಿಯ ಸಮರ ಬೇಡ ಎಂಬ ಅವನ ಹಂಬಲ ಫಲಿಸಲಿಲ್ಲ. ನೂರೊಂದು ಮಕ್ಕಳನ್ನು ಕಳೆದುಕೊಂಡ ಗಾಂಧಾರಿಯ ಕರುಳು ಕಿವುಚಿದಂತಾಯ್ತು. ಪಾಂಡವರ ರಕ್ಷಣೆಗೆ ನಿಂತು ನನ್ನ ಮಕ್ಕಳ ಸಾವಿಗೆ ಕಾರಣೀಭೂತನಾದ ಕೃಷ್ಣನ ಮೇಲೆ ಅವಳ ರೊಚ್ಚಿಗೆ ಮಿತಿ ಎಂಬುದಿಲ್ಲ. ಕೃಷ್ಣಾ, ನಿನ್ನ ಯಾದವ ವಂಶ ನಿರ್ನಾಮವಾಗಲಿ ಎಂಬ ಶಾಪ ನೀಡಿ, ಕುಂತಿ–ವಿದುರ–ಧೃತರಾಷ್ಟ್ರನ ಜೊತೆಗೂಡಿ ಕಾಡಿಗೆ ತೆರಳಿದಳು ಗಾಂಧಾರ ಮನೆತನದ ಗಾಂಧಾರಿ.

ಕುಂತಿಯ ಹಾಗೆಯೇ ಮಹಾನ್ ಸಾಧ್ವಿ ಗಾಂಧಾರಿ. ಅವಳ ಶಾಪ ಹೇಗೆ ಸುಳ್ಳಾದೀತು? ಕೃಷ್ಣನೂ ಯುದ್ಧ–ಸಾವು–ನೋವುಗಳಿಂದ ತತ್ತರಿಸಿದ. ಅಣ್ಣ ಬಲರಾಮನನ್ನು ಕಳೆದುಕೊಂಡಿದ್ದ ಆತ, "ನಾನೂ ನಿರ್ಯಾಣಕ್ಕೆ ತಯಾರು" ಎಂದು ಗಿಡದ ಕೆಳಗೆ ಕುಳಿತುಕೊಂಡ. ಬೇಟೆಗಾರ ಹೂಡಿದ ಬಾಣ ಇವನ ಕಾಲಿಗೆ ತಗುಲಿದ್ದೇ ನೆಪವಾಗಿ ಶ್ರೀಕೃಷ್ಣ ತನ್ನ ಅವತಾರ ಮುಗಿಸಿದ. ಕೊನೆಗಾಲದಲ್ಲಿ ಅರ್ಜುನನ್ನೂ ನೋಡಲು ಸಾಧ್ಯವಾಗಲಿಲ್ಲ.

ಒಂದು ನೂರ ಇಪ್ಪತ್ತೈದು ವರ್ಷ ಬಾಳಿ ಬದುಕಿದ ಶ್ರೀಕೃಷ್ಣ ದೇವರು ಎಂಬುವುದಕ್ಕಿಂತ ಮಹಾನ್ ಮಾನವ ಎಂಬುದು ಸೂಕ್ತವಾದೀತು. ದೇವರೇ ಆಗಿದ್ದಲ್ಲಿ ಪಾಂಡವರು ಪಗಡೆಯಾಟದಲ್ಲಿ ಸೋಲುವುದನ್ನು ತಪ್ಪಿಸಬಹುದಿತ್ತು.

ದ್ರೌಪದಿ ಮಾನಭಂಗದ ಪ್ರಸಂಗ ತಪ್ಪಿಸಲು ಸಾಧ್ಯವಿತ್ತು. ಯುದ್ಧವನ್ನೂ ತಪ್ಪಿಸಬಹುದಿತ್ತು. ಅವನದ್ದು ವರ್ಣರಂಜಿತ ವ್ಯಕ್ತಿತ್ವ. ಮಹಾನ್ ರಸಿಕ. ಯುಕ್ತಿಗಾರ, ತಂತ್ರಗಾರ, ಇಷ್ಟೆಲ್ಲಾ ಆದರೂ ದೂರ್ವಾಸರ ಶಾಪದಂತೆ ಯಾದವರು ಮದ್ಯ ಕುಡಿದು ಹೊಡೆದಾಡಿ, ಬಡಿದಾಡಿ, ತಮ್ಮ ವಂಶ ನಾಶವಾಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

ವಸುದೇವಸುತಂ ದೇವಂ ಕಂಸಚಾಣೂರ ಮರ್ದನಂ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ॥

ವಸುದೇವರ ಮಗನಾದ, ಸದಾ ದೇವಕಿಗೆ ಪರಮಾನಂದವನ್ನು ಕೊಡುವ,

ಕಂಸ ಚಾಣೂರರನ್ನು ನಾಶ ಮಾಡಿದ, ಜಗತ್ತಿನ ಗುರುವಾದ ಕೃಷ್ಣನಿಗೆ ನಮಿಸುವೆನು.

ಯಾದವ ಕುಲದವರು ತಮ್ಮ ತಮ್ಮಲ್ಲಿ ಹೊಡೆದಾಡಿ–ಮದ್ಯಪಾನ ಮಾಡಿ ಮಣ್ಣುಪಾಲಾದ, ಹಾಗೆಯೇ ಕಲಿಯುಗದಲ್ಲಿ ಕೆಲ ರಾಜಕಾರಣಿಗಳು ಪರಸ್ಪರ ಪ್ರತಿಷ್ಠೆಗೆ ಅಂಟಿಕೊಂಡು, ಅಪರೂಪಕ್ಕೆ ಕೈಗೆ ಬಂದಿದ್ದ ಅಧಿಕಾರದ ಚುಕ್ಕಾಣಿ ಕಳೆದುಕೊಡ ನಿದರ್ಶನ ನಮ್ಮೆದುರು ಇದೆ.

ಶ್ರೀಕೃಷ್ಣನ ಮಾನವೀಯ ತತ್ವಾದರ್ಶ ಅಳವಡಿಸಿಕೊಡು ಪರಸ್ಪರ ಒಳಿತು–ಅಭಿವೃದ್ಧಿಗೆ ಶ್ರಮಿಸುತ್ತ ಕುಟುಂಬದ, ಸಮಾಜದ, ರಾಜ್ಯದ, ರಾಷ್ಟ್ರದ ತನ್ಮೂಲಕ ಜಗತ್ತಿನ ಶ್ರೇಯಸ್ಸಿಗೆ ಮುಂದಾಗುವ ಮನಸ್ಸು ನಮ್ಮದಾದರೆ ಸಾಕು. ಅಂತಹ ಸಮೃದ್ಧಿಯನ್ನು ಶ್ರೀಕೃಷ್ಣ ಮನುಕುಲಕ್ಕೆ ಕೊಡಬೇಕು.

# ಸೆ.10ಕ್ಕೆ ಅಪೆಕ್ಸ್ ಬ್ಯಾಂಕ್ ಚುನಾವಣೆ: ಡಿಕೆಶಿ-ರಾಜಣ್ಣ ನಡುವೆ ಜಿದ್ದಾಜಿದ್ದಿ?

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಸಹಕಾರ ಕ್ಷೇತ್ರದ ಪ್ರತಿಷ್ಠಿತ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ಸೆ.10ರಂದು ದಿನಾಂಕ ನಿಗದಿಯಾಗಿದ್ದು, ಮತ್ತೆ ರಾಜಕೀಯ ಕುತೂಹಲ ಮೂಡಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಹಕಾರಿ ಧುರೀಣ ಕೆ.ಎನ್. ರಾಜಣ್ಣ ಬಣಗಳ ನಡುವೆ ಪೈಪೋಟಿ ನಡೆಯುವ ಸಾಧ್ಯತೆ ಇದೆ. ಕಳೆದ ಬಾರಿ ಅಧ್ಯಕ್ಷ ಸ್ಥಾನಕ್ಕಾಗಿ ಡಿ.ಕೆ. ಶಿವಕುಮಾರ್ ಹಾಗೂ ರಾಜಣ್ಣ ನಡುವೆ ಜಿದ್ದಾಜಿದ್ದಿ ನಡೆದಿತ್ತು. ರಾಜಣ್ಣ ಪರ ಬೆಂಬಲ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಿಕೆಯಾಗಿತ್ತು. ಇದೀಗ ಮತ್ತೆ ಚುನಾವಣೆ ನಡೆಯುತ್ತಿರುವುದರಿಂದ ಉಭಯ ಬಣಗಳ ನಡುವೆ ಹಣಾಹಣಿ ನಡೆಯಲಿದೆಯೇ ಎಂಬ ಚರ್ಚೆ ಆರಂಭವಾಗಿದೆ.

ಸುಮಾರು 11 ನಿರ್ದೇಶಕರ ಬೆಂಬಲ ಹೊಂದಿದ್ದಾರೆ ಎನ್ನಲಾಗಿರುವ ರಾಜಣ್ಣ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಬಿಜೆಪಿ–ಜೆಡಿಎಸ್ ಬೆಂಬಲಿತ ನಿರ್ದೇಶಕರು ಅವರ ಬೆಂಬಲಕ್ಕೆ ನಿಲ್ಲುವ ಸಾಧ್ಯತೆಯೂ ಇದೆ ಎನ್ನಲಾಗಿದೆ. ಮತ್ತೊಂದೆಡೆ, ಡಿ.ಕೆ. ಶಿವಕುಮಾರ್ ತಮ್ಮ ಬೆಂಬಲಿಗರನ್ನು ಕಣಕ್ಕಿಳಿಸಲಿದ್ದಾರೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಒಮ್ಮತದ ಆಯ್ಕೆಯಾಗಲಿದೆಯೇ ಅಥವಾ ರಾಜಕೀಯ ಜಿದ್ದಾಜಿದ್ದಿಗೆ ಚುನಾವಣೆ ವೇದಿಕೆಯಾಗಲಿದೆಯೇ ಎಂಬುದು ಸೆ.10ರಂದು ಸ್ಪಷ್ಟವಾಗಲಿದೆ.

## ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಸಿದ್ಧತೆ: ಹೈಕೋರ್ಟ್‌ಗೆ ಸರ್ಕಾರ ಮಾಹಿತಿ

● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ ಚುನಾವಣಾ ಅಧಿಕಾರಿಯನ್ನು ನೇಮಿಸಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಬ್ಯಾಂಕಿನ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಬ್ಯಾಂಕಿನ ನಿರ್ದೇಶಕರೂ ಆಗಿರುವ ಮಾಜಿ ಶಾಸಕ ಬೆಳ್ಳಿ ಪ್ರಕಾಶ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ಐ ಅರುಣ್ ಅವರ ಏಕಸದಸ್ಯ ಪೀಠದ ವಿಚಾರಣೆ ನಡೆಸಿತು.

ಈ ವೇಳೆ ಸರ್ಕಾರದ ಪರ ವಕೀಲರು, ಬ್ಯಾಂಕಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ ಚುನಾವಣಾಧಿಕಾರಿಯನ್ನು ನೇಮಿಸಿದೆ ಎಂದರು.

ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಚುನಾವಣೆಗೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಅರ್ಜಿಗೆ ಸಂಬಂಧಿಸಿದಂತೆ ವಾದ ಮಂಡಿಸಲು ಕಾಲಾವಕಾಶ ಬೇಕೆಂದು ಅಪೆಕ್ಸ್ ಬ್ಯಾಂಕ್ ಪರ ವಕೀಲರು ಮನವಿ ಮಾಡಿದರು. ಇದನ್ನು ಪರಿಗಣಿಸಿದ ಪೀಠ ವಿಚಾರಣೆಯನ್ನು ಸೆಪ್ಟೆಂಬರ್ 8ಕ್ಕೆ ಮುಂದೂಡಿತು.

# ಹನೂರು ಶೂಟೌಟ್: ಕುಟುಂಬಗಳ ಹೇಳಿಕೆ ದಾಖಲು

● ವಿಕ್ರಮ ವಾಹಿನಿ । ಚಾಮರಾಜನಗರ

ಕಾವೇರಿ ವನ್ಯಜೀವಿಧಾಮದ ಕರಿಕಲ್ಲು ಗುಡ್ಡದಲ್ಲಿ ಆಗಸ್ಟ್ 15ರಂದು ಮೂವರು ರೈತರು ಮೃತಪಟ್ಟ ಹನೂರು ಶೂಟೌಟ್ ಪ್ರಕರಣದ ಕುರಿತು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ವಿಚಾರಣೆ ಆರಂಭಿಸಿದೆ.

ಪ್ರಕರಣವನ್ನು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಆಯೋಗ, ಮೃತರಾದ ಆಂಥೋಣಿ ಸ್ವಾಮಿ, ಸೆಬಾಸ್ಟಿಯನ್ ಡೇವಿಡ್ ಕುಮಾರ್ ಹಾಗೂ ಜಾನ್ ರೋಸ್ ಪೀಟರ್ ಅವರ ಕುಟುಂಬಸ್ಥರಿಗೆ ಸೆ.3ರಂದು ಹಾಜರಾಗುವಂತೆ ನೋಟಿಸ್ ನೀಡಿತ್ತು.

ನೋಟಿಸ್‌ನಂತೆ ಮೂರು ಕುಟುಂಬಗಳ ಸದಸ್ಯರು ಬೆಂಗಳೂರಿನಲ್ಲಿರುವ ಮಾನವ ಹಕ್ಕುಗಳ ಆಯೋಗದ ಕಚೇರಿಗೆ ಹಾಜರಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಮುಂದೆ ತಮ್ಮ ಹೇಳಿಕೆಗಳನ್ನು ದಾಖಲಿಸಿದರು. ಅಗತ್ಯವಿರುವ ಆಡಿಯೋ, ವಿಡಿಯೋ ಸೇರಿದಂತೆ ಸಾಕ್ಷ್ಯಾಧಾರಗಳ ಬಗ್ಗೆಯೂ ಮಾಹಿತಿ ನೀಡಿದರು.

ಅರಣ್ಯಾಧಿಕಾರಿಗಳ ಗುಂಡೇಟಿನಿಂದ ಮೂವರು ಮೃತಪಟ್ಟಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಿಐಡಿ ತನಿಖೆ ನಡೆಯುತ್ತಿದೆ.

ಇದೀಗ ಮಾನವ ಹಕ್ಕುಗಳ ಆಯೋಗವೂ ವಿಚಾರಣೆ ಕೈಗೆತ್ತಿಕೊಂಡಿರುವುದರಿಂದ ಪ್ರಕರಣ ಮತ್ತಷ್ಟು ಮಹತ್ವ ಪಡೆದುಕೊಂಡಿದೆ.

ವಿಚಾರಣೆ ವೇಳೆ ಕುಟುಂಬಸ್ಥರು ಘಟನೆಗೆ ಸಂಬಂಧಿಸಿದ ತಮ್ಮ ಅಹವಾಲುಗಳು ಹಾಗೂ ಲಭ್ಯವಿರುವ ಮಾಹಿತಿಯನ್ನು ಆಯೋಗದ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಪ್ರಕರಣದ ವಾಸ್ತವಾಂಶವನ್ನು ಸಮಗ್ರವಾಗಿ ಪರಿಶೀಲಿಸುವಂತೆ ಮನವಿ ಮಾಡಿದ್ದಾರೆ.



**ಬೆಂಗಳೂರು ಚಾಮರಾಜಪೇಟೆ ಸೀತಾಪತಿ ಅಗ್ರಹಾರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಮಂತ್ರಾಲಯ ಶಾಖೆಯಲ್ಲಿ ಇತ್ತೀಚೆಗೆ ನಡೆದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಮೃತೀಕಾ ಬೃಂದಾವನಕ್ಕೆ ಮೂರು ದಿನಗಳ ವಿವಿಧ ಅಲಂಕಾರ ಮಾಡಲಾಗಿತ್ತು.**